# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 956 |
| ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 15-03-2021 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೊರೋನಾ ಲಸಿಕೆ ವಿತರಣೆಯಾಗುತ್ತಿದೆಯೇ; | ರಾಜ್ಯದಲ್ಲಿ ಜನವರಿ 16, 2021 ರಿಂದ ಆರೋಗ್ಯ ಕಾರ್ಯಕರ್ತರಿಗೆ, ಫೆಬ್ರವರಿ 02, 2021 ರಿಂದ ಮುಂಚೂಣಿ ಕಾರ್ಯಕರ್ತರಿಗೆ ಮತ್ತು ಮಾರ್ಚ್ 8, 2021 ರಿಂದ 60 ವರ್ಷ ಮೇಲ್ಪಟ್ಟ ಎಲ್ಲಾ ನಾಗರೀಕರಿಗೆ ಮತ್ತು 45-59 ವರ್ಷ ವಯಸ್ಸಿನ ಸಹ ಅಸ್ವಸ್ಥತೆ ಹೊಂದಿರುವವರಿಗೆ ಕೊರೋನಾ ಲಸಿಕಾಕರಣ ನಡೆಯುತ್ತಿದೆ. |
| ಆ | ರಾಜ್ಯಕ್ಕೆ ಈವರೆವಿಗೆ ಎಷ್ಟು ಲಸಿಕೆಗಳು ಸರಬರಾಜಾಗಿದೆ; | ರಾಜ್ಯದಲ್ಲಿ ಈವರೆವಿಗೆ 33,19,760 ಡೋಸ್ ಕೋವಿಶೀಲ್ಡ್ ಲಸಿಕೆ ಹಾಗೂ 4,60,820 ಡೋಸ್ ಕೋವ್ಯಾಕ್ಸಿನ್ ಲಸಿಕೆ ಸರಬರಾಜಾಗಿದೆ. |
| ಇ | ಈವರೆವಿಗೆ ಎಷ್ಟು ಮಂದಿಗೆ ಲಸಿಕೆಗಳನ್ನು ನೀಡಲಾಗಿರುತ್ತದೆ; | ರಾಜ್ಯದಲ್ಲಿ ದಿನಾಂಕ:11.03.2021 ರ ಅಂತ್ಯಕ್ಕೆ ಒಟ್ಟು 11,74,247 ಡೋಸ್ ಲಸಿಕೆ ನೀಡಲಾಗಿದೆ. |
| ಈ | ಜನ ಸಾಮಾನ್ಯರಿಗೆ ಕೊರೋನಾ ಲಸಿಕೆ ಯಾವಾಗ ದೊರೆಯಲಿದೆ (ಉತ್ತರವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನೀಡಲು ವಿನಂತಿಸಿದೆ) | ಭಾರತ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ 3 ಹಂತಗಳಲ್ಲಿ ಕೋವಿಡ್-19 ಲಸಿಕಾಕರಣವನ್ನು ನಡೆಸಲಾಗಿದೆ. ಭಾರತ ಸರ್ಕಾರದ National Expert Group In Vaccine Administration For Covid-19 (NEGVAC) ಮಾರ್ಗಸೂಚಿಯನ್ವಯ ಲಸಿಕಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಜನ ಸಾಮಾನ್ಯರಿಗೆ ಕೋವಿಡ್ ಲಸಿಕಾರಣದ ಕುರಿತು ಭಾರತ ಸರ್ಕಾರದಿಂದ ಮಾರ್ಗಸೂಚಿ ಬಂದ ಕೂಡಲೇ ಲಸಿಕೆ ನೀಡಲಾಗುವುದು. |

**ಆಕುಕ 32 ಎಸ್‌ಎಂಎಂ 2021**

(ಡಾ|| ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು